**ಮುಕುಂದ:** ಪುಟ್ಟಣ್ಣ, ನಿನ್ನ ಮಗಳು ಇನ್ನೂ ಸಂಗೀತ ಕಲಿಯುತ್ತಿದ್ದಾಳಾ?
**ಪುಟ್ಟಣ್ಣ:** ಈಗ ಅದರ ಅವಶ್ಯಕತೆ ಇಲ್ಲ ಮುಕುಂದ. ಬಾಡಿಗೆ ಇದ್ದವರು ಮನೆ ಖಾಲಿ ಮಾಡಿದ್ದಾರೆ.

**ಸುದರ್ಶನ:** ಮಂಜು, ನನ್ನ ಮಗಳಿಗೆ ಒಳ್ಳೆಯ ಗಂಡು ಇದ್ರೆ ನೋಡು ಅಂತ ಹೇಳಿದ್ದೆ ಅಲ್ವಾ, ಏನಾಯ್ತು?
**ಮಂಜು:** ಒಳ್ಳೆಯ ಗಂಡುಗಳೇನೋ ಇವೆ. ಆದರೆ ಅವರೆಲ್ಲ ಒಳ್ಳೆಯ ಹೆಣ್ಣು ಬೇಕು ಅಂತಿದ್ದಾರೆ.

**ಕಿಟ್ಟು:** ವೆಂಕಿ, ಡಾಕ್ಟರ್ ನಿನಗೆ ಹಲ್ಲು ಕಿತ್ತಾಗ ನೋವಾಯ್ತಾ?
**ವೆಂಕಿ:** ಹಲ್ಲು ಕಿತ್ತಾಗೇನೂ ನೋವಾಗಲಿಲ್ಲ. ಹಲ್ಲು ಕಿತ್ತಿದ್ದಕ್ಕೆ ಒಂದು ಸಾವಿರ ರೂಪಾಯಿ ಕೇಳಿದ್ರು. ಆಗ ನೋವಾಯ್ತು.

**ಸುರೇಶ:** ರಾಮು, ಕೊನೆಗೂ ಚಂದ್ರು ಆಸೆ ನೆರವೇರಲೇ ಇಲ್ಲ.
**ರಾಮು:** ಏನಾಗಿತ್ತು ಅವನ ಆಸೆ?
**ಸುರೇಶ:** ಒಮ್ಮೆಯಾದರೂ ತನ್ನ ಹೆಂಡತಿಯನ್ನು ಹೆದರಿಸಬೇಕು ಅಂತ ಅಂದುಕೊಂಡಿದ್ದ.

**ಡಾಕ್ಟರ್:** ಎಡಗೈ ನೋಯ್ತಿದೆ ಅಂತಿದ್ದೀಯ. ನಿನಗೂ ನಿನ್ನ ಗಂಡನಿಗೆ ಏನಾದರೂ ಗಲಾಟೆ ಆಯ್ತಾ?
**ಆಕೆ:** ಹೌದು ಸರ್. ಈ ವಿಷಯ ನಿಮಗೆ ಹೇಗೆ ಗೊತ್ತಾಯ್ತು?
**ಡಾಕ್ಟರ್:** ಇದೆಲ್ಲ ಈಗ ಮಾಮೂಲು. ಹೋಗ್ಲಿ, ನಿನ್ನ ಗಂಡ ಬಂದಿದ್ದಾರಾ?
**ಆಕೆ:** ಇಲ್ಲ ಸರ್, ಅವರು ಬೇರೆ ಆಸ್ಪತ್ರೆಯ ಐಸಿಯುನಲ್ಲಿ ಇದ್ದಾರೆ.

**ಡಾಕ್ಟರ್:** ಕಿವಿ ಸರಿಯಾಗಿ ಕೇಳಿಸುತ್ತಿದ್ದರೂ ನೀವೇಕೆ, ನನಗೆ ಕಿವಿ ಕೇಳಿಸೋದಿಲ್ಲವೆಂದು ಬರೆದುಕೊಡಲು ಕೇಳುತ್ತಿದ್ದೀರಿ?
**ಆತ:** ನೀವು ಹಾಗೆ ಬರೆದುಕೊಟ್ಟರೆ, ಅದನ್ನು ನನ್ನ ಹೆಂಡತಿಗೆ ತೋರಿಸುತ್ತೇನೆ. ಆಗಲಾದರೂ ಅವಳ ಬೈಗುಳ ನಿಲ್ಲುವುದೇನೋ ನೋಡುವೆ.



ಕಾನೂನು ಹೋರಾಟಕ್ಕೆ ದುಡ್ಡನ್ನು ನೀರಿನಂತೆ ಖರ್ಚು ಮಾಡಿದ್ದು ಅಲ್ವೇ..?

**ಗೌರಮ್ಮ:** ಪುಟ್ಟಮ್ಮ, ನಿಮ್ಮ ಮಗಳು ಶ್ರೀಮಂತ ವರನೇ ಬೇಕು ಅಂತ ಕೇಳ್ತಾ ಇದ್ದಾಳಲ್ಲ ಏಕೆ?
**ಪುಟ್ಟಮ್ಮ:** ಶ್ರೀಮಂತ ಗಂಡನನ್ನು ಬಡವನನ್ನಾಗಿ ಮಾಡಬಹುದು. ಆದರೆ, ಬಡವ ಗಂಡನನ್ನು ಶ್ರೀಮಂತನನ್ನಾಗಿ ಮಾಡೋಕೆ ಆಗುವುದಿಲ್ಲ ಅದಕ್ಕೆ.

**ಶಿವರಾಮು:** ಇನ್ನು ಮುಂದೆ ಸುಳ್ಳು ಹೇಳುವುದಿಲ್ಲವೆಂದು ದೇವರ ಬಳಿ ಪ್ರಮಾಣ ಮಾಡ್ದೆ. ಆದ್ರೆ ಮನೆಯಲ್ಲಿ ನೀನು ಹಾಗೇ ನಡೆದುಕೊಳ್ಳುವುದಿಲ್ಲ ಯಾಕೆ?
**ರವಿ:** ಪ್ರಮಾಣ ಮಾಡಿದಂತೆ ಹೊರಗಡೆ ಸುಳ್ಳು ಹೇಳುವುದನ್ನು ಬಿಡಬಹುದು. ಆದರೆ, ಮನೆಯಲ್ಲಿ ಹೆಂಡತಿ ಮಾಡಿದ ಅಡುಗೆ, ಆಕೆ ಕೆಲಸ ಕಾರ್ಯಗಳು ಹೇಗೆ ಇದ್ದರೂ ಹೊಗಳಲೇಬೇಕಲ್ಲ...



**ಶಿಲ್ಪ:** ರಮ್ಯಾ, ನಮ್ಮವರಿಗೆ ಸುಳ್ಳು ಹೇಳಿ ಅಂತ ಹೇಳಿದ್ರೂ ನಿಜ ಹೇಳಿ ಬಿಡ್ತಾರೆ ಕಣೆ.
**ರಮ್ಯಾ:** ಹೌದಾ, ಅಂಥ ನಿಜ ಏನು ಹೇಳಿದ್ರು?
**ಶಿಲ್ಪ:** ಮನೆಗೆ ಅವರ ಸಂಬಂಧಿಕರು ಬಂದಿದ್ದರು. ಅವರಿಗೆ ನನ್ನ ನಿಜವಾದ ವಯಸ್ಸು ಹೇಳಿ ಬಿಡೋದೇ...

**ರಾಘು:** ನಾಣಿ, ನಿಮ್ಮ ಅಳಿಯ ಕಿಟ್ಟುಗೆ ಯಾರೇ ಏನೇ ಕೊಟ್ರೂ ವಾಪಸ್ಸು ಕೊಡುವುದಿಲ್ಲವಂತೆ, ಹೌದಾ?
**ನಾಣಿ:** ಹೌದು, ಅವನ ಆ ಗುಣ ಮೆಚ್ಚಿಯೇ ನನ್ನ ಮಗಳನ್ನು ಅವನಿಗೆ ಮದುವೆ ಮಾಡಿಕೊಟ್ಟೆ.
**ರಾಘು:** ಹೌದಾ? ಗೊತ್ತಿದ್ದು ಗೊತ್ತಿದ್ದು ಅಂಥವನಿಗೆ ನಿಮ್ಮ ಮಗಳನ್ನು ಕೊಟ್ಟು ತಪ್ಪು ಮಾಡಿದ್ರಿ ಅನಿಸುತ್ತಿಲ್ಲವೇ?
**ನಾಣಿ:** ಸರಿನೇ ಮಾಡಿದ್ದೀನಿ. ಅವನು ನನ್ನತ್ರ ಒಂದು ಕೋಟಿ ರೂಪಾಯಿ ಸಾಲ ಮಾಡಿದ್ದ. ಎಷ್ಟೇ ಕೇಳಿದರೂ ವಾಪಸ್ಸು ಕೊಡಲಿಲ್ಲ. ಹೀಗಾಗಿ, ಮದುವೆ ಖರ್ಚಿನ ರೂಪದಲ್ಲಿ ಸಾಲವನ್ನು ಜಮೆ ಹಾಕಿ ಅವನಿಗೆ ಮಗಳನ್ನು ಕೊಟ್ಟೆ.

**ರಶ್ಮಿಕಾ:** ಶಾಂತ, ನನ್ನ ಗಂಡ ಒಂದು ಕೋಟಿ ರೂಪಾಯಿಯ ಜೀವವಿಮೆ ಮಾಡಿಸಿದ್ದಾರೆ.
**ಶಾಂತ:** ನೀವು ಪುಣ್ಯವಂತರು ಬಿಡಿ.
**ರಶ್ಮಿಕಾ:** ಏನು ಪುಣ್ಯವೋ ಏನೋ, ಅದು ನನ್ನ ಕೈಗೆ ಯಾವಾಗ ಸಿಗುತ್ತೋ...

**ಚಂದ್ರು:** ಶೇಖರ, ಒಂದೊಂದ್ಸಾರಿ ಸುಳ್ಳೇ ನಿಜವಾಗಿಬಿಡುತ್ತೆ ಕಣೊ.
**ಶೇಖರ:** ಯಾಕೋ ಹೀಗೆ ಹೇಳ್ತಾ ಇದ್ದೀಯಲ್ಲ?
**ಚಂದ್ರು:** ನೋಡೋ, ನಮ್ಮತ್ತೆಗೆ ಹುಷಾರಿಲ್ಲ ಅಂತ ಸುಳ್ಳು ಹೇಳಿ ರಜೆ ತೆಗೆದುಕೊಂಡು ಮನೆಗೆ ಹೋದ್ರೆ, ಅಷ್ಟೊತ್ತಿಗಾಗಲೇ ಊರಿಂದ ನಮ್ಮ ಅತ್ತೆ ಬಂದು ಕುಳಿತಿದ್ರು.

**ರಾಜು:** ದಾಂಪತ್ಯದಲ್ಲಿ ಯಾರು ದಡ್ಡರು?
**ರಮೇಶ:** ನನ್ನ ಹೆಂಡತಿ.
**ರಾಜು:** ಹೇಗೆ ಹೇಳ್ತೀಯಾ?
**ರಮೇಶ:** ನನ್ನನ್ನು ಮದುವೆಯಾಗಿಲ್ಲವೇ...

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ